ಕರ್ನಾಟಕ ಸರ್ಕಾರ

**ಪಲ್ಲವಿ ಆಕುರಾತಿ, ಭಾ.ಆ.ಸೇ.**
ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ

**C/o ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಎರಡನೇ ಮಹಡಿ,**
**ಡಾ॥ ಬಿ.ಆರ್. ಅಂಬೇಡ್ಕರ್ ವೀದಿ,**
**ಬೆಂಗಳೂರು-560 001**
**ಇ-ಮೇಲ್:** icps.kar@gmail.com

---

ಅ.ಸ.ಪ.ಸಂಖ್ಯೆ: ಕೆಎಸ್‌ಐಸಿಪಿಎಸ್/ಮರ/ಪುನರ್ವಸತಿ & ಶಿಕ್ಷಣ-114/2020-21 ದಿ:06.01.2021

ಮಾನ್ಯರೆ,

ವಿಷಯ: ವಲಸಿಗ ಕುಟುಂಬಗಳ ಮಕ್ಕಳಿಗೆ ಪುನರ್ವಸತಿ ಮತ್ತು ಶಿಕ್ಷಣ ಒದಗಿಸುವ ಕುರಿತು

ಉಲ್ಲೇಖ: ನಿರ್ದೇಶನಾಲಯದ ಅರೆ ಸರ್ಕಾರಿ ಪತ್ರ ಸಂಖ್ಯೆ:ಕೆಎಸ್ ಐಸಿಪಿಎಸ್/ಮರ/2020-21/853, ದಿ:07.12.2020

* * * * * *

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅರೆ ಸರ್ಕಾರಿ ಪತ್ರದಲ್ಲಿ ಬಳ್ಳಾರಿಯಿಂದ ಮೈಸೂರು ಜಿಲ್ಲೆಗೆ ಕಬ್ಬು ಕಡಿಯಲು ಬಂದಿದ್ದ ಕುಟುಂಬಕ್ಕೆ ಸೇರಿದ 3 ಮಕ್ಕಳು ನೀರಿನಲ್ಲಿ ಮುಳುಗಿ ಮರಣ ಹೊಂದಿರುವ ಮತ್ತು ಬಳ್ಳಾರಿ ಜಿಲ್ಲೆಯಿಂದಲೇ ಮಂಡ್ಯ ಜಿಲ್ಲೆಗೆ ಕಬ್ಬು ಕಡಿಯಲು ಬಂದಿದ್ದ ಕುಟುಂಬಕ್ಕೆ ಸೇರಿದ ಅಪ್ರಾಪ್ತ ಬಾಲಕಿಯ ಕೊಲೆ ಪ್ರಕರಣಗಳು ಮರುಕಳಿಸದಂತೆ ಕ್ರಮಕೈಗೊಳ್ಳಲು ವಲಸಿಗ ಕುಟುಂಬದವರ 0-6 ವರ್ಷದ ಮಕ್ಕಳ ಮಾಹಿತಿಯು ಅಂಗನವಾಡಿಗಳಲ್ಲಿ ಮತ್ತು 6-18 ವರ್ಷದ ಮಕ್ಕಳ ಮಾಹಿತಿಯು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನಡೆಯುವ ಋತುಮಾನ ಕಾರ್ಯಕ್ರಮದಡಿ ಪುನರ್ವಸತಿ ಮತ್ತು ಶಿಕ್ಷಣ ಕಲ್ಪಿಸಿರುವುದರಿಂದ ಸದರಿ ಮಾಹಿತಿಯು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಲಭ್ಯವಿರುವುದಾಗಿ ತಿಳಿಸಿ, ಸದರಿ ಮಾಹಿತಿಯು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಲಭ್ಯವಾದಲ್ಲಿ ಅಂತಹ ವಲಸಿಗ ಕುಟುಂಬದ ಮಕ್ಕಳನ್ನು ಕುಟುಂಬದ ಮೂಲ ಜಿಲ್ಲೆಗಳಲ್ಲಿರುವ ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಅಂದರೆ ಬಾಲಮಂದಿರ, ವಿಶೇಷ ದತ್ತು ಪಾಲನಾ ಸಂಸ್ಥೆ ಮತ್ತು ಶಿಶು ಮಂದಿರ ಇತ್ಯಾದಿ ಸಂಸ್ಥೆಗಳಲ್ಲಿ ಮಕ್ಕಳ ಕಲ್ಯಾಣ ಸಮಿತಿ ಮುಖಾಂತರ ದಾಖಲಿಸಿಕೊಂಡು ಈ ಮಕ್ಕಳಿಗೆ ಪುನರ್ವಸತಿ ಒದಗಿಸಲು ಅನುವಾಗುತ್ತದೆ ಎಂದು ತಿಳಿಸಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಮಕ್ಕಳ ರಕ್ಷಣಾ ಇಲಾಖೆಯ ಮಧ್ಯೆ ಸಮನ್ವಯ ಮತ್ತು ಸಹಕಾರ ಸಾಧಿಸಿ ವಲಸಿಗ ಕುಟುಂಬದ ಮಕ್ಕಳನ್ನು ಮೇಲ್ಕಂಡ ಘೋರ ಘಟನೆಗಳಿಂದ ಪಾರು ಮಾಡಲು ಕ್ರಮ ಕೈಗೊಳ್ಳಲು ಕೋರಲಾಗಿತ್ತು.

ಇತ್ತೀಚೆಗೆ ಈ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಯವರು ವಲಸಿಗರ ಕುಟುಂಬದವರ ಮಕ್ಕಳಿಗೆ ಅವರ ಮೂಲ ಜಿಲ್ಲೆಯಲ್ಲಿ ಅಥವಾ ಅವರು ವಲಸೆ ಬಂದ ಜಿಲ್ಲೆಯಲ್ಲಿ ಎರಡೂ ಕಡೆ ಪೋಷಕರ ಇಚ್ಛೆಯ ಮೇರೆಗೆ ಮಕ್ಕಳ ಪಾಲನೆ ಮತ್ತು ರಕ್ಷಣೆಯನ್ನು ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಒದಗಿಸಬೇಕೆಂದು ಕೋರಿರುತ್ತಾರೆ.

ಆದ್ದರಿಂದ, ಉಲ್ಲೇಖಿತ ಪತ್ರಕ್ಕೆ ಮುಂದುವರಿದಂತೆ, ಕೋವಿಡ್-19ರ ಹಿನ್ನೆಲೆಯಲ್ಲಿ ಅಂಗನವಾಡಿ ಕೇಂದ್ರ ಹಾಗೂ ಶಾಲೆಗಳನ್ನು ಮುಚ್ಚಿರುವುದರಿಂದ ವಲಸಿಗರ ಕುಟುಂಬದ ಮಕ್ಕಳ ಮಾಹಿತಿಯನ್ನು 0-6 ವರ್ಷದ ಮಕ್ಕಳ ಮಾಹಿತಿಯು ಅಂಗನವಾಡಿ ಕೇಂದ್ರಗಳಲ್ಲಿ ಮತ್ತು 6-18 ವರ್ಷದ ಮಕ್ಕಳ ಮಾಹಿತಿಯು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ವಲಸಿಗರ ಕುಟುಂಬಗಳ ಮಕ್ಕಳಿಗಾಗಿ ನಡೆಯುವ ಋತುಮಾನ ವಸತಿಯುತ ಶಾಲೆ ಕಾರ್ಯಕ್ರಮದಡಿ ಪುನರ್ವಸತಿ ಮತ್ತು ಶಿಕ್ಷಣ

ಕಲ್ಪಿಸಿರುವುದರಿಂದ ಕ್ರಮವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಮಾಹಿತಿ ಪಡೆದು ವಲಸೆ ಕುಟುಂಬಗಳ ಮಕ್ಕಳ ಪಾಲನೆ ಮತ್ತು ರಕ್ಷಣೆಯನ್ನು **ಪೋಷಕರ ಇಚ್ಛೆಯ ಮೇರೆಗೆ ಮೂಲ ಜಿಲ್ಲೆಯಲ್ಲಿ ಅಥವಾ ವಲಸೆ ಬಂದ ಜಿಲ್ಲೆಯಲ್ಲಿ ಆದ್ಯತೆಯ ಮೇರೆಗೆ ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ** ಅಂದರೆ ಬಾಲಮಂದಿರ, ವಿಶೇಷ ದತ್ತು ಪಾಲನಾ ಸಂಸ್ಥೆ ಮತ್ತು ಶಿಶು ಮಂದಿರ ಇತ್ಯಾದಿ ಸಂಸ್ಥೆಗಳಲ್ಲಿ ಮಕ್ಕಳ ಕಲ್ಯಾಣ ಸಮಿತಿ ಮುಖಾಂತರ ದಾಖಲಿಸಿಕೊಂಡು ಈ ಮಕ್ಕಳಿಗೆ ಪುನರ್ವಸತಿ ಒದಗಿಸಲು ಅನುಕೂಲವಾಗುವಂತೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಮಕ್ಕಳ ರಕ್ಷಣಾ ಇಲಾಖೆಯ ಮಧ್ಯೆ ಸಮನ್ವಯ ಮತ್ತು ಸಹಕಾರ ಸಾಧಿಸಿ ವಲಸಿಗ ಕುಟುಂಬದ ಮಕ್ಕಳನ್ನು ಮೇಲ್ಕಂಡ ಘೋರ ಘಟನೆಗಳಿಂದ ಪಾರು ಮಾಡಲು ಕ್ರಮ ಕೈಗೊಳ್ಳಲು ಕೋರಿದೆ.

ತಮ್ಮ ವಿಶ್ವಾಸಿ,

06.01.2021

ಶ್ರೀ/ಶ್ರೀಮತಿ ______________
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಎಲ್ಲಾ ಜಿಲ್ಲೆಗಳು.